ಹುಡುಗರ ಕಣ್ಣಲ್ಲಿ, ಕನಸಲ್ಲಿ ಸದಾ ಗಿರಕಿ ಹೊಡೆವ ಚೆಲುವ ಬೊಂಬೆ ನನ್ನ ಬಾಳ ಸಂಗಾತಿಯಾಗುವುದನ್ನು ಕನಸಿನಲ್ಲಿ ಕೂಡ ಕಲ್ಪಿಸಲಾರದವನಾಗಿದ್ದೆ. ಅವಳೇನಿದ್ದರೂ ನಡುರಾತ್ರಿಯ ಕನಸಿಗೇ ಸರಿ. ಇಲ್ಲ ಸುಮ್ಮನೊಮ್ಮೆ ಸಿಕ್ಕಿ ಹಾಗೆ ಬಂದು ಹೀಗೆ ಹೋದರೂ ಸರಿಯೇ. ಅವತ್ತು ಮದುವೆ ಮಂಟಪದಲ್ಲಿ ಅವಳ ಕಂಗಳನ್ನು ಸೆರೆ ಹಿಡಿದು ಏನಾದರೂ ಹೇಳಲು ನೋಡಿದರೆ ಚಂದ್ರಾ ಅಪ್ಪಟ ಅಪರಿಚಿತೆಯಂತೆ ವರ್ತಿಸಿದ್ದಳು. ಒಂದು ಮದುವೆ ಇಷ್ಟೆಲ್ಲ ಬದಲಾವಣೆ ತರಬಹುದೆ ಅನಿಸಿತ್ತು ಆದರೆ ಅವತ್ತಿಗೆ ಅವಳ ಬದಲಾವಣೆಗೆ ನಾನೆ ಕಾರಣವೆಂದು ಹೊಳೆದೇ ಇರಲಿಲ್ಲ... ಇವತ್ತಿಗೂ ಚಂದ್ರಾ ಹಾಗೇ ಇದ್ದಳು. ನಾನೇ ಅವಳನ್ನು ಮಾತಾಡಿಸಲು ಪ್ರಯತ್ನಿಸಿದಾಗಲೂ ಅವಳು ದಿಟ್ಟ ಧಿಕ್ಕಾರ ತೋರಿ ನನ್ನ ಅಹಂಗೆ ಘಾಸಿ ಮಾಡಿದ್ದಳು. ಅವಳು ಹಾಗೆ ನಿರ್ವಿಕಾರವಾಗಿ, ನಿಕೃಷ್ಟವಾಗಿ ನನ್ನತ್ತ ನೋಡಿದಾಗ ಅವಳ ಜೀವನದಲ್ಲಿ ನನ್ನ ಅಸ್ತಿತ್ವವೇ ಇರಲಿಲ್ಲವೇನೋ ಅನಿಸಿ ಕಂಗಾಲಾಗಿದ್ದೆ. 'ಹುಡುಗಿಯರ ಪ್ರೀತಿಯಂತೆ ತಿರಸ್ಕಾರವಾದರೂ ಉತ್ಕಟವಾಗೇ ಇರುತ್ತೆ ರವೀ, ಇದಕ್ಕೆಲ್ಲ ತಲೆ ಕೆಡಿಸಿಕೋಬೇಡ. ನಿನ್ನನ್ನೂ ದಾಟಿ ಅವಳು ಬಹಳಷ್ಟು ಬದುಕುಕಂಡಿದ್ದಾಳೆ. ಅವಳನ್ನ ಕೆದಕಿ ಮತ್ತಷ್ಟು ತೊಂದರೆ ಕೊಡಬೇಡ' ಅಂದಿದ್ದಳು ವಾರಿಜ. ಅವಳು ಹೀಗೇ! ಎಲ್ಲವನ್ನೂ ಕರುಣೆಯಿಂದಲೇ ನೋಡುತ್ತಾಳೆ. ಅವಳೊಂದಿಗೆ ಏನನ್ನಾದರೂ ಹೇಳಿಕೊಳ್ಳಬಹುದಿತ್ತು ಆದರೂ ನಾನು ಮಧುರಿಮಾಳ ಕುರಿತು ಬಾಯ್ಬಿಟ್ಟಿರಲಿಲ್ಲ. ಮಧುರಿಮಾಳ ನೆನಪನ್ನು ಸಂಪೂರ್ಣವಾಗಿ ಅಳಿಸಿ ಹಾಕಬೇಕೆಂಬುವುದು ನನ್ನ ತುಡಿತವಾಗಿತ್ತು ಆದರೆ ಹಾಗೆ ಯತ್ನಿಸಿದಷ್ಟೂ ಅದು ಭೂತಾಕಾರವಾಗಿ ಬೆಳೆದು ನನ್ನನ್ನು ಅಣಕಿಸುವಂತೆ.. ಕಾಣುತ್ತಿತ್ತು. ಅವಳನ್ನು ಕೊಲ್ಲಬೇಕೆನ್ನುವಷ್ಟು ಸಿಟ್ಟು ಬಂದಿತ್ತು. 'ಎಲ್ಲರಿಗೂ ಒಂದಲ್ಲ ಒಂದು ದಿನ ನ್ಯಾಯ ಸಿಕ್ಕೇ ಸಿಗುತ್ತದೆ. ಅದಕ್ಕಾಗಿ ಕಾಯಬೇಕಷ್ಟೇ' ವಾರಿಜ ಎಂದೋ ಹೇಳಿದ ಮಾತು ಅಂದಿನ ರಾತ್ರಿ ನೆನಪಾಗಿ ನನ್ನನ್ನು ಮತ್ತಷ್ಟು ಕುಗ್ಗಿಸಿತ್ತು. ಇಂದು ನನಗಾಗುತ್ತಿರುವ ನೋವು ಅಂದು ಚಂದ್ರಾ ಪಟ್ಟಿರಬಹುದಾದ ನೋವಿಗೆ ಸಂದ ನ್ಯಾಯವೇ? ಪ್ರಶ್ನೆಗಳು ನನ್ನನ್ನು ತೋಯಿಸಿದ್ದವು.



ಇಡೀ ರಾತ್ರಿ ನಾನು ಸರಿಯಾಗಿ ನಿದ್ರೆಯೇ ಮಾಡಲಿಲ್ಲ. ಅಸ್ಪಷ್ಟ ಕನಸುಗಳಲ್ಲಿ ವಾರಿಜ, ಚಂದ್ರಾ, ಮಧುರಿಮಾ ಎಲ್ಲರೂ ಬಂದಂತಿತ್ತು. ಹಾಗೂ ಹೀಗೂ ಹೊರಳಿ ನರಳಿ ಬೆಳಗಾಗುವಷ್ಟರಲ್ಲಿ ಮಾಯದ ನಿದ್ರೆ. ಎಚ್ಚರವಾದಾಗ ಅಮ್ಮನ ಗೊಣಗಾಟ ಕಿವಿಗೆ ಬಿದ್ದಿತ್ತು. ಪಾತ್ರೆಗಳ ಸದ್ದಿನಿಂದಲೇ ನಾನು ಇವತ್ತು ಅಮ್ಮ ಸಿಟ್ಟಿನಲ್ಲಿರುವುದು ತಿಳಿಯುತ್ತಿತ್ತು. ಅಮ್ಮ ಬಯ್ಯುತ್ತಿದ್ದಳು... ಹೊರಗೆ ಬಂದು ನೋಡಿದರೆ ಅಮ್ಮ ತಾನೇ ಕೂತು ಪಾತ್ರೆ ಬೆಳಗುತ್ತಿದ್ದಳು. ವಾರಿಜ ಕೆಲಸಕ್ಕೆ ಹೋಗಿರಬೇಕು, ಚಂದ್ರಾಳೂ ಬಂದಿರಲಿಕ್ಕಿಲ್ಲ... ಅಮ್ಮ ಕೋಪಗೊಂಡಿದ್ದಾಳೆ. ಅವಳನ್ನು